ಮರ್ಯಾದೆ ಬೇಡವೇ? ಸುಮ್ಮೆ ಕೂತ್ಕೋ. ಯಾಕಂಗೆ ಭೇದಿ ಹತ್ತೋರಂಗೆ ಆಡ್ತೀಯಾ' ಎಂದೆ. ಇಬ್ಬರೂ ಗೊಳ್ಳೆಂದು ನಕ್ಕರು. ಪಕ್ಷಿ ಹಾರಿ ಹೋಯಿತು.

ಹೀಗೆಲ್ಲಾ ಪಕ್ಷಿಬೇಟೆಗೆ ಕೂತಾಗ ಮಾತಾಡುವುದು; ಮೊಬೈಲ್ ರಿಂಗಾಗುವುದು, ಬೀಡಿ ಸಿಗರೇಟು ಸೇದುವುದು, ಗಟ್ಟಿಯಾಗಿ ಕೆಮ್ಮುವುದು ಎಲ್ಲವೂ ಅಕ್ಷ್ಯಮ್ಯ ಅಪರಾಧ. ಹೂಸು ಬಂದರೂ ಕಂಟ್ರೋಲಿನಲ್ಲೇ ನಿಶ್ಯಬ್ದವಾಗಿ ಹೊರಹಾಕಬೇಕು. ಎಷ್ಟೋ ಜನ ಪಟಗಾರರು ಮಂಗಟ್ಟೆ ತರಹದ ಅತಿ ಸೂಕ್ಷ್ಮ ಹಕ್ಕಿಯ ಮರಿಗಳ ಲಾಲನೆ ಪಾಲನೆಯ ಚಿತ್ರೀಕರಣ ಮಾಡುವಾಗ ಒಂದೂ ಮಾತಾಡದೆ ವ್ರತನಿಷ್ಠರಾಗಿ ತಿಂಗಳುಗಟ್ಟಲೆ ಕೂತಿರುತ್ತಾರಂತೆ. ಉಚ್ಚೆ ಬಂದರೂ ನೆಲಕ್ಕೆ ಹೊಯ್ಯುವಂತಿಲ್ಲ. ಬಾಟಲಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಬಿಸ್ಕತ್ತು, ಒಣ ಹಣ್ಣು ತಿಂದು ಇರಬೇಕು. ಇಪ್ಪತ್ತು ವರ್ಷಗಳಿಂದ ಮಂಗಟ್ಟೆ ಹಕ್ಕಿಗಳ ಬದುಕಿನ ಮೇಲೆ ಚಿತ್ರೀಕರಣ ಮಾಡುತ್ತಿರುವ ದಾಂಡೇಲಿಯ ಉಮೇಶ್ ಅವರು ಈ ಸೂಕ್ಷ್ಮಗಳೆನ್ನೆಲ್ಲಾ ನನಗೆ ಹೇಳಿದಾಗ ನಾನು ದಿಗ್ಭ್ರಮೆಗೊಂಡಿದ್ದೆ. ಆದರೆ ನಮ್ಮ ಸ್ಕೇರ್ಲೆಟ್ ಫೇಸ್ಡ್ ಲಿಯೋ ಚಿಚಾಲ ಈ ಜಾಗಕ್ಕೆ ಅಭ್ಯಾಸವಾಗಿದ್ದ ಐನಾತಿಯಾದ ಕಾರಣ ಅದು ಮತ್ತೆ ಬಂದೇ ಬರುತ್ತೆ ಎಂಬ ಗ್ಯಾರಂಟಿಯಿತ್ತು. ನಾಳೆಯ ತನಕ ಅದಕ್ಕಾಗೇ ಸಮಯ ಮೀಸಲಿದ್ದ ಕಾರಣ ತಪ್ಪುವ ಭಯವೇ ಇರಲಿಲ್ಲ. ಲಿಯೋ ಚಿಚಾಲ ಜೊತೆಗೆ ನಮಗಲ್ಲಿ ಬ್ಲೂ ವಿಂಗ್ಡ್ ಲಾಫಿಂಗ್ ಥ್ರಶ್, ಚೆಸ್ಟ್ ನಟ್ ಕ್ರೌನ್ಡ್ ಲಾಫಿಂಗ್ ಥ್ರಶ್ ಹಕ್ಕಿಗಳೂ ಸಿಕ್ಕವು. ನಾವು ನಿರೀಕ್ಷೆ ಮಾಡದಿದ್ದ ಅತಿ ಸುಂದರ ಬಣ್ಣದ ಹಕ್ಕಿ ಕಾಮನ್ ಗ್ರೀನ್ ಮ್ಯಾಕ್ ಪ್ಲೇ ಕೂ ಬಂದಿತು. ಇದರ ಕಣ್ಣುಗಳೇ ಸುಂದರ. ಗಾಢ ಬಣ್ಣ ಮನಸ್ಸಲ್ಲೇ ಉಳಿದು ಹೋಗುತ್ತದೆ. ಸತ್ತಾಲಿನಲ್ಲಿ ಇದರ ಚಿತ್ರ ತೆಗೆದಿದ್ದೆ. ಈಗ ಮತ್ತೊಮ್ಮೆ ಬಂದು ಮನಸ್ಸನ್ನು ಸಂತೋಷಪಡಿಸಿ ಹೆಚ್ಚು ಹೊತ್ತು ನಿಲ್ಲದೆ ಓಡಿತು. ಇದರ ನಡುವೆ ಅಚ್ಚರಿ ಹುಟ್ಟಿಸಿದ್ದು ಬೇರೆ ಹಕ್ಕಿಗಳ ಗೂಡಿನಿಂದ ಮೊಟ್ಟೆ ಕದಿಯುವ ಎಲ್ಲೋ ಬಿಲ್ಲೀಡ್ ಬ್ಲೂ ಮ್ಯಾಕ್ ಪ್ಲೇ ಖಗದ ವರ್ತನೆ. ಬರೊಬ್ಬರಿ ಮೂರು ಮೊಟ್ಟೆಗಳನ್ನು ಕಳ್ಳತನ ಮಾಡಿ ತಂದು ನಮ್ಮೆದುರಿಗೇ ಹೊಡೆದು ತಿಂದಿತು. ಮೊಟ್ಟೆ ಇಟ್ಟು ಜೋಪಾನ ಮಾಡುವ ಕಡಿಮೆ ಶಕ್ತಿ ಇರುವ ಪಕ್ಷಿಗಳ ಮೇಲೆ ಗೂಂಡಾಗಿರಿ ಮಾಡಿ ಅವುಗಳ



ಸಂಕುಲದ ತತ್ತಿಗಳ ಕದಿಯುವ ಬಿಲ್ಲೀಡ್ ಬ್ಲೂ ಮ್ಯಾಕ್ ಪ್ಲೇ ಹಲ್ಲೆಕೋರ ಕೂಡ ಹೌದು. ಅಡ್ಡ ಬಂದರೆ ತಾಯಿ ಹಕ್ಕಿಯನ್ನು ಕೊಲ್ಲಲೂ ಇದು ಹೇಸುವುದಿಲ್ಲ. ನಮಗೆಲ್ಲಾ ಈ ಗಲಾಟೆ, ಗದ್ದಲ, ಖೂನಿ ತೀರಾ ವಿಚಿತ್ರವಾಗಿ ಕಂಡರೂ ಇದು ಪ್ರಕೃತಿ ರೂಪಿಸಿರುವ ವಿಧಿ ನಿಯಮ. ಮೂಕ ಪ್ರೇಕ್ಷರಾಗಿ ನೋಡುವುದಷ್ಟೇ ನಮ್ಮ ಕೆಲಸ. ಸಂಜೆಯಾಗುವ ಹೊತ್ತಿಗೆ ಯಾವುದೋ ಪ್ರಾಣಿ ನಮ್ಮತ್ತ ಚಲಿಸಿದಂತಾಯಿತು. ಕೇವಲ ಪಕ್ಷಿಗಳ ನಿರೀಕ್ಷೆಯಲ್ಲಿದ್ದ ನಮಗಿದು ಅಚ್ಚರಿ. ಉಸಿರು ಬಿಗಿ ಹಿಡಿದು ಸುಮ್ಮನೆ ಕೂತೆವು. ಉದ್ದ ಬಾಲದ ಪುನುಗು ಬೆಕ್ಕು ನಿಧಾನಕ್ಕೆ ನಡೆದು ಬಂದು ಅಲ್ಲಲ್ಲಿ ಮೂಸತೊಡಗಿತ್ತು. ಅನಿರೀಕ್ಷಿತ ಈ ಅತಿಥಿ ಬಂದಾಗ ಬೆಳಕೇ ಇರಲಿಲ್ಲ. ಟಾರ್ಚು ಬಳಸಿ ನಿಧಾನಕ್ಕೆ ಒಂದಿಷ್ಟು ಪಟಗಳ ಕ್ಲಿಕ್ಕಿಸಿದೆವು. ಪ್ರಾಯಶಃ ಬಿಲ್ಲೀಡ್ ಬ್ಲೂ ಮ್ಯಾಕ್ ಪ್ಲೇ ತಂದು ತಿಂದು ಹೋದ ಮೊಟ್ಟೆಗಳ ವಾಸನೆಯ ಜಾಡು ಹಿಡಿದು ಇಲ್ಲಿಗೆ ಬಂದಿರಬಹುದೆಂದು ನಾವು ತರ್ಕಿಸಿದೆವು. ಆದರೆ ನಿಜವಾಗಿಯೂ ಅದು ಏತಕ್ಕೆ ಬಂದಿತ್ತು? ಎಂಬ ವಿಷಯ ನಮಗೆ ರಹಸ್ಯವಾಗಿ ಉಳಿಯಿತು.

●